1	2	3	4	5	6
86	Maharudraiah.H.M.	Wire man-II	31.12.03	14	1,74,664.00
87	Basavarajappa.M.	Ph.optr.,	31.01.04	10	1,30,560.00
88	Basavarajappa.J.	I.A.	31.01.04	07	1,06,571.00
89	Thumminakatte.K.H.	Jr.cl	31.01.04	03	39,341.00
90	Basavarajappa.C.	Sr.cl	31.01.04	05	67,385.00
91	Deveerappa	Sr.cl	31.01.04	03	41,471.00
92	Shivakumar.K.P.	F.A.	31.01.04	07	93,604.00
93	Jayappa.H.C.	Jr.cl.	29.2.04	08	1,05,584.00
94	Mallikarjunappa.K.	Attender	31.3.04	01	12,074.00
95	Krishnamurthy.N.B.	Welder	30.04.04	07	89,959.00
96	Thimmanagowda.G.	Asst. Panman	30.04.04	10	35,410.00
97	Ashok Kumar Singh	Pan i/c.	30.4.04	08	1,13,648.00
98	Veerabasappa.G.	C.F.O	31.5.04	06	24,433.00
99	Nagarajappa.A.	Cost.A.c.	30.6.04	07	1,02,578.00
100	Maharudraiah.K.M.	S.B.A.	31.07.04	02	26,756.00
101	Kotrappa.S.	Hort.supr.,.	31.07.04	DetailsGiven below*	
102	Hanumanthappa.A.K.	Jr.cl	31.07.04	01	13.614.00
103	Sali S.S.	Wage cl.,	31.08.04	06	84,372.00
104	Amanullakhan	Driver	30.10.04	01	13,719.00
105	Lingappa G.S.	Veh.i/c.	30.10.04	01	13,719.00
106	Channamallikarjuna	P.Store Keeper	31.3.05	02	32,224.00
107	Kotraiah K.M.	Asst.Secretary	30.04.05	02	34,364.00

Since his remaining service is less than six months he is not eligible for VRS benefit.

5609(6474) : ಶ್ರೀ ರೇಣುಕಾಚಾರ್ಯ ಎಂ.ಪಿ. (ಹೊನ್ನಾಳಿ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಅಂಗವಿಕಲರಿಗೆ ಸಮಾನತೆಯನ್ನು ಕಾಪಾಡಲು ವಿವಿಧ ಇಲಾಖೆಗಳಲ್ಲಿ ಶೇ. 3 ರಷ್ಟು ಮೀಸಲಾತಿಯನ್ನು ಸರ್ಕಾರದಿಂದ ಪಾಲಿಸಲಾಗಿದೆಯೇ;

ಆ) ರಾಜ್ಯ ಸರ್ಕಾರದ ಯಾವ ಯಾವ ಇಲಾಖೆಯಲ್ಲಿ ಮೀಸಲಾತಿ ಕಲ್ಪಿಸಲಾಗಿದೆ; ಸಂಖ್ಯೆ ಎಷ್ಟು;

ಇ) ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ನ್ಯಾಯಬೆಲೆ ಅಂಗಡಿ ಹಂಚಿಕೆ ವಿಚಾರದಲ್ಲಿ ಅಂಗವಿಕಲರ ಶೇ. 3 ಮೀಸಲಾತಿಯನ್ನು ಕಡೆಗಣಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ ನಿಯಮಗಳು, 1977ರ ನಿಯಮ 9 (1ಎ) ರನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿ "ಸಿ" ಮತ್ತು "ಡಿ" ದರ್ಜೆಯ ಹುದ್ದೆಗಳ ನೇರ ನೇಮಕಾತಿಯಲ್ಲಿ ಅಂಗವಿಕಲರಿಗೆ ಶೇಕಡ 5 ರಷ್ಟು ಮೀಸಲಾತಿ ಕಲ್ಪಿಸಲಾಗಿದೆ.

ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿ ನ್ಯಾಯಬೆಲೆ ಅಂಗಡಿ ಮಂಜೂರಾತಿ ನೀಡುವಲ್ಲಿ ಅಂಗವಿಕಲರಿಗೆ ಶೇಕಡ 3 ರಷ್ಟು ಮೀಸಲಾತಿಯನ್ನು ನೀಡುವ ಬಗ್ಗೆ ಕರಡನ್ನು ಸಾರ್ವಜನಿಕ ವಿತರಣೆ ಪದ್ಧತಿ (ನಿಯಂತ್ರಣ) ಆದೇಶದಲ್ಲಿ ಪ್ರಸ್ತಾಪಿಸಲಾಗಿದೆ. ಸಧ್ಯ ಜಾರಿಯಲ್ಲಿರುವ ಆದೇಶದಲ್ಲಿ ಖಾಸಗಿ ವ್ಯಕ್ತಿಗಳಿಗೆ ಮಂಜೂರಾತಿ ನೀಡುವ ವೇಳೆಯಲ್ಲಿ ಅಂಗವಿಕಲರಿಗೆ ಆದ್ಯತೆ ಕಲ್ಪಿಸಲಾಗಿದೆ.

ಆ) ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಮೀಸಲಾತಿ ಕಲ್ಪಿಸಲಾಗಿದೆ.

ಇ) ಹೊನ್ನಾಳಿ ತಾಲ್ಲೂಕಿನಲ್ಲಿ ಒಟ್ಟು 69 ಖಾಸಗಿ ವ್ಯಕ್ತಿಗಳಲ್ಲಿ ಇಬ್ಬರು ಅಂಗವಿಕಲರಿಗೆ ನ್ಯಾಯಬೆಲೆ ಅಂಗಡಿ ಮಂಜೂರು ಮಾಡಲಾಗಿದೆ.

ಈ) ಉದ್ಭವಿಸುವುದಿಲ್ಲ.

5610(6247) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದುಳಿದ ವರ್ಗಗಳ, ಪರಿಶಿಷ್ಟ ಜಾತಿ/ವರ್ಗಗಳ ಹಾಗೂ ಅಲ್ಪಸಂಖ್ಯಾತರ ಪೈಕಿ ಆರ್ಥಿಕವಾಗಿ ಹಿಂದುಳಿದವರು ಸಹಕಾರ ಸಂಘಗಳಲ್ಲಿ ಸದಸ್ಯರಾಗ ಬಯಸಿದ್ದಲ್ಲಿ, ಸದಸ್ಯತ್ವದ ಶುಲ್ಕವನ್ನು ಭರಿಸುವ ಬಗೆಗಿನ ಯೋಜನೆ ಸರ್ಕಾರಕ್ಕಿದೆಯೇ;

ಆ) ಹಾಗಿದ್ದಲ್ಲಿ, ಯಾವ ಹಂತದಲ್ಲಿದೆ; ಯೋಜನೆಯನ್ನು ಜಾರಿಗೊಳಿಸುವುದು ಯಾವಾಗ (ವಿವರ ನೀಡುವುದು)?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು):

ಅ) ಹೌದು.

ಆ) ಸಕ್ರಿಯ ಪರಿಗಣನೆಯಲ್ಲಿದ್ದು, 2005–06ನೇ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಯೋಜನೆಯನ್ನು ಜಾರಿಗೊಳಿಸಲಾಗುವುದು.

5611(6408) : ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಎಲ್ಲೆಲ್ಲಿ ಹಾಪ್‌ಕಾಮ್ಸ್ ಮಳಿಗೆಗಳಿವೆ;

ಆ) ಹೊಸದಾಗಿ ಯಾವ ಯಾವ ಹಾಪ್‌ಕಾಮ್ಸ್ ಮಳಿಗೆಗಳನ್ನು ತೆರೆಯಬೇಕೆಂಬ ಮನವಿ ಯಾರ್ಯಾರಿಂದ ಬಂದಿವೆ;